**ಸಾಕ್ಷಿಯನ್ನು ದಿಃ 16.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ದೂರುದಾರ ನನ್ನ ಅಣ್ಣ. ನಾನು, ಚಂದ್ರಶೇಖರ್, ಜಯರಾಮ ಮತ್ತು ವೆಂಕಟೇಶ್ ಸ್ನೇಹಿತರು. ಅಪಘಾತ ಪಡಿಸಿದ ಕ್ಯಾಂಟರ್ ಲಾರಿ ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ. ಅದರ ಚಾಲಕ ನನಗೆ ಪರಿಚಿತ. ಅಪಘಾತಕ್ಕೂ ಮೂರು ವರ್ಷದ ಹಿಂದಿನಿಂದ ನಾನು ಲೋಡರ್ ಆಗಿ ಕೆಲಸ ಮಾಡುತ್ತಿದ್ದೆ. ಕೆಲಸಕ್ಕೆ ಕರೆದವರ ಬಳಿ ಹೋಗಿ ಕೆಲಸ ಮಾಡುತ್ತೇನೆ. ಅಪಘಾತದ ದಿನ ಲೋಡರ್ ಆಗಿ ಬರುವಂತೆ ಮನು ಡ್ರೈವರ್ ಕರೆದಿರುತ್ತಾನೆ. ನಾನು ಚಂದ್ರಶೇಖರ್ ಲಾರಿಯ ಹಿಂಭಾಗ ಮೂಟೆ ಮೇಲೆ ಕುಳಿತಿದ್ದು ಇಬ್ಬರು ಲಾರಿ ಮುಂಭಾಗ ಕುಳಿತಿದ್ದರು. ದೂರನ್ನು ನನ್ನ ಮಾಹಿತಿ ಮೇರೆಗೆ ನೀಡಿದ್ದಾರೆ ಎಂದರೆ ಸರಿ. ನನ್ನ ಅಣ್ಣನಿಗೆ ಓದಲು ಬರೆಯಲು ಬರುತ್ತದೆ. ಅವರೇ ದೂರನ್ನು ಟೈಪ್ ಮಾಡಿಸಿ ಠಾಣೆಗೆ ನೀಡಿದ್ದಾರೆ. ದೂರಿನಲ್ಲಿ ಮೇಲ್ಕಂಡ ನಾವು ನಾಲ್ಕು ಜನ ಲಾರಿಯ ಮೂಟೆಗಳ ಮೇಲೆ ಕುಳಿತಿದ್ದೇವು ಎಂದು ಬರೆದಿದ್ದಾರೆ ಎಂದರೆ ಸರಿ. ಪೋಲೀಸರು ತನಿಖೆ ಮಾಡಿ ಸಲ್ಲಿಸಿದ ಅಂತಿಮ ವರದಿಯಲ್ಲೂ ನಾವು ನಾಲ್ಕು ಜನ ಮೂಟೆ ಮೇಲೆ ಕುಳಿತು ಪ್ರಯಾಣಿಸುತ್ತಿದ್ದೇವು ಎಂದು ನಮೂದಿದೆ ಎಂದರೆ ಸರಿ. ಲಾರಿ ಲೋಡ್ ಆಗಿದ್ದ ಕಾರಣ ನಮಗೆ ಹಿಡಿದುಕೊಳ್ಳಲು ಏನು ಇರಲಿಲ್ಲ ಎಂದರೆ ಸರಿ. ಆದ ಕಾರಣ ನಮ್ಮ ಅಜಾಗರೂಕತೆಯನ್ನು ತೋರಿಸುತ್ತದೆ ಎಂದರೆ ಸರಿಯಲ್ಲ. ನಾವು ಹೋಗುತ್ತಿದ್ದ ಲಾರಿಯಲ್ಲಿ ಚಾಲಕನ ಪಕ್ಕದಲ್ಲಿ ಒಬ್ಬನಿಗೆ ಮಾತ್ರ ಕುಳಿತುಕೊಳ್ಳುವ ಅವಕಾಶ ಇದೆ ಎಂದರೆ ಸರಿ.

2. ಲಾರಿಗೆ ಪರ್ಮಿಟ್ ಇತ್ತೋ ಇಲ್ಲವೋ ಗೊತ್ತಿಲ್ಲ. ಲಾರಿಗೆ ಪರ್ಮಿಟ್ ಇಲ್ಲದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಅಪಘಾತ ಆಗಿ ಮೂರುವರೆ ವರ್ಷ ಆಗಿದ್ದು ಗಾಯಗಳು ವಾಸಿಯಾಗಿ ನಾನು ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ಕೊನೆಯದಾಗಿ ಯಾವಾಗ ವೈಧ್ಯರ ಬಳಿ ಹೋಗಿದ್ದೇನೆ ಎಂದು ನೆನಪಿಲ್ಲ. ನನಗೆ ಹಿಮ್ಮಡಿಗೆ ಮಾತ್ರ ಪೆಟ್ಟಾಗಿತ್ತು ಎಂದರೆ ಸರಿ. ವೈಧರಲ್ಲಿಗೆ ಹೋದ ಎಲ್ಲಾ ದಾಖಲೆಗಳನ್ನು ನಾನು ಹಾಜರು ಪಡಿಸಿದ್ದೇನೆ. ನ್ಯಾಯಾಲಯಕ್ಕೆ

ಹಾಜರು ಪಡಿಸಿರುವ ದಾಖಲೆಗಳ ಪ್ರಕಾರ ಏಪ್ರಿಲ್ 2023 ರನಂತರ ನಾನು ವೈದ್ಯರಲ್ಲಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನನಗೆ ಗಾಯಗಳು ವಾಸಿಯಾಗಿರುವ ಕಾರಣ ಆನಂತರ ಆಸ್ಪತ್ರೆಗೆ ಹೋಗುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ.

3. ನನಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇತ್ತು. ವೈದ್ಯರಲ್ಲಿಗೆ ಅಪಘಾತದ ಬಗ್ಗೆ ನಾನೇ ಹೇಳಿದ್ದೇನೆ. ನಾನು ಹೇಳಿದ ಹಾಗೆ ಅವರು ಬರೆದುಕೊಂಡಿದ್ದಾರೆ. ಅವರ ದಾಖಲೆ ಪ್ರಕಾರ ನಾನು ಗೂಡ್ಸ್ ವಾಹನದಲ್ಲಿ ಹೋಗುವಾಗ ಮೇಲಿನಿಂದ ಕೆಳಗೆ ಬಿದ್ದಿದೇನೆ ಎಂದು ಇದೆ ಎಂದರೆ ಸರಿ. ವಾಹನದ ತಪಾಸಣಾ ವರದಿಯಲ್ಲಿ ಅದಕ್ಕೆ ಯಾವುದೇ ಜಖಂ ಆಗಿಲ್ಲ ಎಂದು ಇದೆ ಎಂದರೆ ಸರಿ. ಆದ ಕಾರಣ ನಾವಾಗಿಯೇ ಹಿಡಿದುಕೊಳ್ಳಲು ಏನು ಇಲ್ಲದ ಕಾರಣ ಕೆಳಕ್ಕೆ ಬಿದ್ದಿದ್ದೇವೆಯೇ ಹೊರತು ಚಾಲಕನ ನಿರ್ಲಕ್ಷ್ಯತನದಿಂದ ಅಲ್ಲ ಎಂದರೆ ಸರಿಯಲ್ಲ. ಆ ಕಾರಣ ದೂರನ್ನು ಎರಡು ದಿನ ತಡವಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ. ನಾವು ಸ್ನೇಹಿತರು, ಪೋಲೀಸರು, ಚಾಲಕ ಶಾಮಿಲಾಗಿ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಮಸ್ಯೆ ಇದೆ ಎಂದು ಪ್ರಮಾಣ ಪತ್ರದಲ್ಲಿ ಸುಳ್ಳಾಗಿ ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಆ ರೀತಿ ಸುಳ್ಳಾಗಿ ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ಔಷದಿ. ಬಿಲ್ಲುಗಳಷ್ಟು ಪ್ರಮಾಣದಲ್ಲಿ ನಾವು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಔಷಧಿ ಬಿಲ್ಲುಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ನನ್ನ ನಿರ್ಲಕ್ಷತನ ಕಾರಣ ಇರುವ ಕಾರಣ ನಾವು ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ. ಪರ್ಮಿಟ್ ಇಲ್ಲದೇ ಇದ್ದ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಭಾದ್ಯರಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.